1

# ದಿನಾಂಕ: 04–10–2011ರಂದು ಪೂರ್ವಾಹ್ನ: 11–00 ಗಂಟೆಗೆ ಹೊಯ್ಸಳ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀ ಹುಚ್ಚೇಗೌಡ,
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ.

ಹಾಜರಿ :05

ಗೈರು ಹಾಜರಿ:02

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td></td><td>ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಸಭೆಗೆ ಹಾಜರಿದ್ದ ಮಾನ್ಯ ಅಧ್ಯಕ್ಷರು, ಸಮಿತಿ ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು.</td><td></td></tr>
<tr><td>1</td><td>ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಪರಿಷ್ಕರಿಸಿಕೊಡುವ ಕುರಿತು</td><td>2011–12ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆಯ ಪ್ರಚಾರ ಮತ್ತು ಸಾಹಿತ್ಯ ಲೆಕ್ಕಶೀರ್ಷಿಕೆ 2435–00–101–0–38 ಮತ್ತು ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ ಲೆಕ್ಕಶೀರ್ಷಿಕೆ 2435–00–101–0–02 ಕಾರ್ಯಕ್ರಮದಡಿ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಪರಿಷ್ಕರಿಸಿಕೊಡುವಂತೆ ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ವಿವರ ಕೆಳಕಂಡಂತಿದೆ.<br>1) ಪ್ರಚಾರ ಮತ್ತು ಸಾಹಿತ್ಯ ಲೆಕ್ಕಶೀರ್ಷಿಕೆ 2435–00–101–0–38 (ಗುರಿ ರೂ.5.00 ಲಕ್ಷ)<br><br>ಹಿಂದೆ ನಿಗದಿಪಡಿಸಿದ ಗುರಿ
<table>
<tr><th>ಕ್ರಸಂ</th><th>ಇಲಾಖಾ ಕಾರ್ಯಕ್ರಮದ ವಿವರ</th><th>ನಿಗದಿತ ಮೊತ್ತ</th></tr>
<tr><td>1</td><td>ಇಲಾಖಾ ಕಾರ್ಯಕ್ರಮದಡಿ ಸಿಗುವ ಸವಲತ್ತುಗಳ ಸಂಕ್ಷಿಪ್ತ ಮುದ್ರಣ ಎಂ.ಎಂ.ಆರ್ ಪ್ರಗತಿ ವರದಿ ಮುದ್ರಣ, ಬ್ಲೋಅಪ್ಸ್ ಚಾರ್ಟ್ಸ್, ಕರಪತ್ರಗಳು, ಕಿರುಹೊತ್ತಿಗೆಗಳು ಇತರೆ ಮುದ್ರಣ</td><td>0.80</td></tr>
<tr><td>2</td><td>ಹಾಸನ ನಗರದಲ್ಲಿ ಜರುಗುವ ದನಗಳ ಜಾತ್ರೆ ವಸ್ತು ಪ್ರದರ್ಶನದಲ್ಲಿ ತಾಂತ್ರಿಕ ಮಳಿಗೆ ತೆರೆಯುವುದು / ಮೈಸೂರು ದಸಾರಾ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವುದು</td><td>0.30</td></tr>
<tr><td>3</td><td>ರಾಜ್ಯೋತ್ಸವ ಅಂಗವಾಗಿ ನಡೆಯುವ ಫಲಪುಷ್ಪ ಪ್ರದರ್ಶನಕೆಕ ವೆಚ್ಚ ಭರಿಸಲು</td><td>2.60</td></tr>
<tr><td>4</td><td>ಇಲಾಖೆ ಯೋಜನೆಗಳ ಮತ್ತು ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಗೆ ಮುನ್ನೇಚ್ಚರಿಕೆ ಕ್ರಮಗಳು, ಸಿಂಪರಣೆ ವೇಳಾ ಪಟ್ಟಿಯನ್ನು ರೇಡಿಯೋ ಮುಖಾಂತರ ಪ್ರಚಾರ ಕೈಗೊಳ್ಳುವುದು.</td><td>0.30</td></tr>
<tr><td>5</td><td>ಎ.ಪಿ.ಎಂ.ಸಿ. ಆವರಣದಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಆಲೂಗೆಡ್ಡೆ</td><td>1.00</td></tr>
</table>
</td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br><br>ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆರವರು ಕೋರಿರುವಂತೆ, 2011–12ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆಯ ಪ್ರಚಾರ ಮತ್ತು ಸಾಹಿತ್ಯ ಲೆಕ್ಕಶೀರ್ಷಿಕೆ 2435–00–101–0–38 ಮತ್ತು ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ ಲೆಕ್ಕಶೀರ್ಷಿಕೆ 2435–00–101–0–02 ಕಾರ್ಯಕ್ರಮದಡಿ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಪರಿಷ್ಕರಿಸಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
</table>

| | | |
|---|---|---|
| | ಬೆಳೆಯ ಹಾಗೂ ಇತರೆ ತೋಟಗಾರಿಕೆ ಬೆಳೆಗಳ ಬಗ್ಗೆ ಬೇಸಾಯದಲ್ಲಿ ಬೀಜೋಪಚಾರ, ಸಮಗ್ರ ರೋಗ ಮತ್ತು ಕೀಟಗಳ ನಿರ್ವಹಣೆ ಹಾಗೂ ರೈತರು ಕೈಗೊಳ್ಳಬೇಕಾದ ಮುನ್ನೇಚರಿಕೆ ಕ್ರಮಗಳ ಬಗ್ಗೆ ಹೆಚ್ಚಿನ ಪ್ರಚಾರ ಮಾಡುವುದು. | |
| | ಒಟ್ಟು : | 5.00 |

**ಪರಿಷ್ಕರಿಸಿರುವ ಗುರಿ**

| ಕ್ರಸಂ | ಇಲಾಖಾ ಕಾರ್ಯಕ್ರಮದ ವಿವರ | ನಿಗದಿತ ಮೊತ್ತ |
|---|---|---|
| 1 | ಇಲಾಖಾ ಕಾರ್ಯಕ್ರಮದಡಿ ಸಿಗುವ ಸವಲತ್ತುಗಳ ಸಂಕ್ಷಿಪ್ತ ಮುದ್ರಣ ಎಂ.ಎಂ.ಆರ್ ಪ್ರಗತಿ ವರದಿ ಮುದ್ರಣ, ಬ್ಲೋಅಫ್ಸ್ ಚಾರ್ಟ್ಸ್, ಕರಪತ್ರಗಳು, ಕಿರುಹೊತ್ತಿಗೆಗಳು ಇತರೆ ಮುದ್ರಣ | 0.80 |
| 2 | ರಾಜ್ಯೋತ್ಸವ ಅಂಗವಾಗಿ ನಡೆಯುವ ಫಲಪುಷ್ಪ ಪ್ರದರ್ಶನಕೆಕ ವೆಚ್ಚ ಭರಿಸಲು | 1.00 |
| 3 | ಇಲಾಖೆ ಯೋಜನೆಗಳ ಮತ್ತು ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಗೆ ಮುನ್ನೇಚ್ಚರಿಕೆ ಕ್ರಮಗಳು, ಸಿಂಪರಣೆ ವೇಳಾ ಪಟ್ಟಿಯನ್ನು ರೇಡಿಯೋ ಮುಖಾಂತರ ಪ್ರಚಾರ ಕೈಗೊಳ್ಳುವುದು. | 0.30 |
| 4 | ಎ.ಪಿ.ಎಂ.ಸಿ. ಆವರಣದಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಆಲೂಗೆಡ್ಡೆ ಬೆಳೆಯ ಹಾಗೂ ಇತರೆ ತೋಟಗಾರಿಕೆ ಬೆಳೆಗಳ ಬಗ್ಗೆ ಬೇಸಾಯದಲ್ಲಿ ಬೀಜೋಪಚಾರ, ಸಮಗ್ರ ರೋಗ ಮತ್ತು ಕೀಟಗಳ ನಿರ್ವಹಣೆ ಹಾಗೂ ರೈತರು ಕೈಗೊಳ್ಳಬೇಕಾದ ಮುನ್ನೇಚರಿಕೆ ಕ್ರಮಗಳ ಬಗ್ಗೆ ಹೆಚ್ಚಿನ ಪ್ರಚಾರ ಮಾಡುವುದು. | 1.00 |
| 5 | ಹಾಸನ ನಗರದಲ್ಲಿ ಜರುಗುವ ದನಗಳ ಜಾತ್ರೆ ವಸ್ತು ಪ್ರದರ್ಶನದಲ್ಲಿ ತಾಂತ್ರಿಕ ಮಳಿಗೆ ತೆರೆಯುವುದು / ಮೈಸೂರು ದಸಾರಾ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವುದು | 0.30 |
| 6 | ತೋಟಗಾರಿಕೆ ಬೆಳೆಗಳ ಪ್ರಚಾರ | 0.50 |
| 7 | ತೋಟಗಾರಿಕೆ ಬೆಳೆಗಳ ಕರಪತ್ರ ಮುದ್ರಣ ಬ್ಲೋಅಪ್ಸ್ ಚಾರ್ಟ್ಸ್ ತಯಾರಿಸುವುದು | 0.60 |
| 8 | ಮೈಸೂರು ದಸರಾ ಮಹೋತ್ಸವದಲ್ಲಿ ಸ್ತಬ್ಧ ಚಿತ್ರ ಪ್ರದರ್ಶಿಸಲು | 0.50 |
| | ಒಟ್ಟು : | 5.00 |

2) ತಾಳೆಎಣ್ಣೆ ವ್ಯವಸಾಯ ಲೆಕ್ಕಶೀರ್ಷಿಕೆ 2435-00-101-0-02 (ಗುರಿ ರೂ.3.00 ಲಕ್ಷ)

**ಹಿಂದೆ ನಿಗದಿಪಡಿಸಿದ ಗುರಿ**

| ಕ್ರಸಂ | ಇಲಾಖಾ ಕಾರ್ಯಕ್ರಮದ ವಿವರ | ನಿಗದಿತ ಮೊತ್ತ |
|---|---|---|
| 1 | ಸಣ್ಣಕೆರೆ ನಿರ್ಮಾಣಕ್ಕೆ ಸಹಾಯಧನ | 0.40 |
| 2 | ಡೀಸೆಲ್ ಪಂಪ್‌ಸೆಟ್‌ಗೆ ಸಹಾಯಧನ | 0.10 |
| 3 | ಕೊಳವೆ ಬಾವಿ ಕೊರೆಯಲು | 2.50 |
| | ಒಟ್ಟು : | 3.00 |

**ಪರಿಷ್ಕರಿಸಿರುವ ಗುರಿ**

| ಕ್ರಸಂ | ಇಲಾಖಾ ಕಾರ್ಯಕ್ರಮದ ವಿವರ | ನಿಗದಿತ ಮೊತ್ತ |
|---|---|---|
| 1 | ಹನಿ ನೀರಾವರಿ ಸಹಾಯಧನ | 1.00 |
| 2 | ಹಣ್ಣು ಕಟಾವು ಯಂತ್ರದ ಸಹಾಯಧನ | 0.50 |
| 3 | ಪ್ರಚಾರ ಮತ್ತು ಸಾಹಿತ್ಯ ಸಹಾಯಧನ | 0.25 |
| 4 | ರೈತರ ತರಬೇತಿ ಕಾರ್ಯಕ್ರಮ ಸಹಾಯಧನ | 1.25 |
| | ಒಟ್ಟು : | 3.00 |

ತಾಳೆ ಎಣ್ಣೆ ವ್ಯವಸಾಯ ಲೆಕ್ಕಶೀರ್ಷಿಕೆಯ ರೂ.3.00 ಲಕ್ಷ ಇಲಾಖಾ ಕಾರ್ಯಕ್ರಮ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ ಅನುಮೋದನೆ ನೀಡಲಾಯಿತು.

ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಗೊರೂರು ಹೇಮಾವತಿ ಜಲಾಶಯದ ಮುಂಬಾಗದಲ್ಲಿ ತಾಳೆಗಿಡಗಳನ್ನು ನೆಡಲಾಗಿದೆ. ಆದರೆ, ಅವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೆ ಇರುವುದರಿಂದ, ತಾಳೆಗಿಡಗಳು ಹಾಳಾಗಿರುತ್ತವೆ. ಅಲ್ಲದೆ, ತೋಟಗಾರಿಕೆ ಇಲಾಖೆಗೆ ಸೇರಿದ ಕಟ್ಟಡ ಇರುತ್ತದೆ. ಆದ್ದರಿಂದ, ಈ ಪ್ರದೇಶವನ್ನು ಅಭಿವೃದ್ದಿಪಡಿಸುವ ನಿಟ್ಟಿನಲ್ಲಿ ಡಿ.ಗ್ರೂಪ್ ನೌಕರರನ್ನು ನೇಮಿಸಬೇಕು. ಅಲ್ಲದೆ, ಅದು ವಡ್ಡರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿರುತ್ತದೆ. ಮುಂದುವರೆದು, ಸಾಮಾಜಿಕ ಅರಣ್ಯ ಇಲಾಖೆ ಮತ್ತು ಜಿಲ್ಲಾ ಜಲಾನಯನ ಅಭಿವೃದ್ದಿ ಇಲಾಖೆಯ ವತಿಯಿಂದಲೂ ಸಹ ತೋಟಗಾರಿಕೆ ಇಲಾಖೆಯ ಜಾಗದ ಪಕ್ಕದಲ್ಲಿಯೇ ತೇಗ ಮತ್ತು ಇತರೆ ಗಿಡಗಳನ್ನು ನೆಡಲಾಗಿದೆ. ಇವುಗಳನ್ನೂ ಸಹ ಗೊರೂರು ಎಂದೇ ಹೆಸರಿಸಲಾಗಿದೆ. ಆದ್ದರಿಂದ, ಗೊರೂರು ಎಂಬುದರ ಬದಲಿಗೆ ವಡ್ಡರಹಳ್ಳಿ ಗ್ರಾಮ ಎಂದು ಬದಲಾವಣೆ ಮಾಡಬೇಕೆಂದು ಕೋರಿದರು.

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ತೋಟಗಾರಿಕೆ ಇಲಾಖೆಯ ವತಿಯಿಂದ ಗೊರೂರು ಹೇಮಾವತಿ ಜಲಾಶಯದ ಮುಂದೆ ಇರುವ ತಾಳೆಗಿಡ ತೋಟವನ್ನು ಅಭಿವೃದ್ದಿಪಡಿಸಲು ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಸೂಕ್ತ ಪ್ರಸ್ತಾವನೆಯನ್ನು ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಲು ಕ್ರಮ

ಗೊರೂರು ಹೇಮಾವತಿ ಜಲಾಶಯದ ಮುಂಬಾಗದಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ ತಾಳೆಗಿಡ ತೋಟವನ್ನು ಅಭಿವೃದ್ದಿಪಡಿಸಲು ಅವಶ್ಯ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಸದರಿ ತೋಟಗಾರಿಕಾ ಕ್ಷೇತ್ರಕ್ಕೆ ಹೆಸರು ಬದಲಾವಣೆ ಮಾಡುವ ಬಗ್ಗೆ ಹಾಗೂ ದನಗಳಿಂದ ಅಗತ್ಯ ರಕ್ಷಣೆ ನೀಡುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮ ವಹಿಸಲು ಸೂಚಿಸಿ, ಸಭೆಯಲ್ಲಿ ನಿರ್ಣಯಿಸಲಾಯಿತು.

| | | | |
|---|---|---|---|
| | | ವಹಿಸಬೇಕೆಂದು ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ತೋಟಗಾರಿಕೆ, ಸಾಮಾಜಿಕ ಅರಣ್ಯ ಇಲಾಖೆ ಮತ್ತು ಜಿಲ್ಲಾ ಜಲಾನಯನ ಅಭಿವೃದ್ದಿ ಇಲಾಖೆಯವರು , ಹೇಮಾವತಿ ಜಲಾಶಯದ ಮುಖ್ಯ ಇಂಜಿನಿಯರ್, ಗೊರೂರು ಇವರಿಗೆ ದನಗಳನ್ನು ತೋಟದ ಒಳಗೆ ಬಿಡದೆ ಇರುವಂತೆ ಸಾರ್ವಜನಿಕರಿಗೆ ನಿರ್ದೇಶನ ನೀಡಬೇಕೆಂದು ಕೋರಿ ಪತ್ರ ಬರೆಯಬೇಕೆಂದು ಕೋರಿದರು. | |
| 2 | 2011–12ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆಯಡಿ ವಿವಿಧ ವರ್ಗದ ಸಹಕರ ಸಂಘಗಳಿಗೆ ಷೇರು ಬಂಡವಾಳದ ಸಹಾಯ (ಸಾಮಾನ್ಯ) ನಬಾರ್ಡ್/ ಎನ್.ಸಿ.ಡಿ.ಸಿ ಯಡಿ ಗೋದಾಮು ರಿಪೇರಿಗಾಗಿ ಅನುದಾನವನ್ನು ಒದಗಿಸಲು ಷೇರು ಬಂಡವಾಳ ಮಂಜೂರಾತಿಗಾಗಿ ಅನುಮೋದನೆ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಗೋದಾಮು ರಿಪೇರಿ/ಸಹಕಾರ/2011–12 ದಿನಾಂಕ: 01–10–2011ರಂದು ಸಭೆಯಲ್ಲಿ ಮಂಡಿಸಲಾಯಿತು.<br>2011–12ನೇ ಸಾಲಿನ ಲೆಕ್ಕಶೀರ್ಷಿಕೆ 4425–00–101–0–26ರಡಿಯಲ್ಲಿ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳದ ಸಹಾಯ (ಸಾಮಾನ್ಯ/ ಎನ್.ಸಿ.ಡಿ.ಸಿ) ಯೋಜನೆಯಡಿ ಅನುದಾನವನ್ನು ಒದಗಿಸಲು ಜಿಲ್ಲೆಯ 4 ಸಹಕಾರ ಸಂಘಗಳಿಗೆ ಗೋದಾಮು ರಿಪೇರಿಗಾಗಿ ರೂ.2.00ಲಕ್ಷ ಗಳಿಗೆ ಅನುಮೋದನೆ ನೀಡುವಂತೆ ಸಹಕಾರ ಸಂಘಗಳ ಉಪ ನಿಬಂಧಕರು, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ಚರ್ಚಿಸಿದಂತೆ, ಸಹಕಾರ ಇಲಾಖೆಯ ಪ್ರಸ್ತಾವನೆಯನ್ನು ಮುಂದಿನ ಸಭೆಗೆ ಮಂಡಿಸುವಂತೆ ನಿಬಂಧಕರು, ಸಹಕಾರ ಇಲಾಖೆರವರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 3 | 2011–12ನೇ ಸಾಲಿನ ಜಿಲಾ ಪಂಚಾಯತ್ ಯೋಜನೆಯಡಿ ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಹಾಯಧನ ಮಂಜೂರಾತಿಗಾಗಿ ಅನುಮೋದನೆ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಹಾಉಮಸಸಂಮೂಸೌ/ಸಹಕಾರ/2011–12 ದಿನಾಂಕ: 01–10–2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2011–12ನೇ ಸಾಲಿನ ಲೆಕ್ಕ ಶೀರ್ಷಿಕೆ 2425–00–101–0–30 ಜಿಲ್ಲಾ ಪಂಚಾಯತ್ ಯೋಜನೆಯಡಿ ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಹಾಯಧನ ಮಂಜೂರಾತಿಗಾಗಿ ಜಿಲ್ಲೆಯ 9 ಸಹಕಾರ ಸಂಘಗಳಿಗೆ ರೂ.1.50ಲಕ್ಷಗಳಗಳಿಗೆ ಅನುಮೋದನೆ ನೀಡುವಂತೆ ಉಪ ನಿಬಂಧಕರು, ಸಹಕಾರ ಇಲಾಖೆರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ಚರ್ಚಿಸಿದಂತೆ, ಸಹಕಾರ ಇಲಾಖೆಯ ಪ್ರಸ್ತಾವನೆಯನ್ನು ಮುಂದಿನ ಸಭೆಗೆ ಮಂಡಿಸುವಂತೆ ನಿಂಬಂಧಕರು, ಸಹಕಾರ ಇಲಾಖೆರವರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 4 | 2011–12ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆಯಡಿ ವಿವಿಧ ವರ್ಗದ ಸಹಕಾರ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಹಾಉಮಸಸಂಮೂಸೌ/ಸಹಕಾರ/2011–12 ದಿನಾಂಕ: 01–10–2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2011–12ನೇ ಸಾಲಿನ ಲೆಕ್ಕ ಶೀರ್ಷಿಕೆ 2425–00–101–0–28 ಜಿಲ್ಲಾ ಪಂಚಾಯತ್ ಯೋಜನೆಯಡಿ | ಸಭೆಯಲ್ಲಿ ಚರ್ಚಿಸಿದಂತೆ, ಸಹಕಾರ ಇಲಾಖೆಯ ಪ್ರಸ್ತಾವನೆಯನ್ನು ಮುಂದಿನ ಸಭೆಗೆ ಮಂಡಿಸುವಂತೆ ನಿಂಬಂಧಕರು, ಸಹಕಾರ ಇಲಾಖೆರವರಿಗೆ ತಿಳಿಸಲು |

| | | | |
|---|---|---|---|
| | ಸಂಘಗಳಿಗೆ ಸಹಾಯಧನ/ ಎನ್.ಸಿ.ಡಿ.ಸಿ ಯೋಜನೆಯಡಿ ಅನುದಾನವನ್ನು ಒದಗಿಸಲು ಸಹಾಯಧನ ಮಂಜೂರಾತಿ ಗಾಗಿ ಅನುಮೋದನೆ ನೀಡುವ ಕುರಿತು. | ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ / ಎನ್.ಸಿ.ಡಿ.ಸಿ ಯೋಜನೆಯಡಿ ಅನುದಾನವನ್ನು ಒದಗಿಸಲು ಸಹಾಯಧನ ಮಂಜೂರಾತಿಗಾಗಿ ಜಿಲ್ಲೆಯ 6 ಸಹಕಾರ ಸಂಘಗಳಿಗೆ ರೂ.1.50ಲಕ್ಷಗಳಗಳಿಗೆ ಅನುಮೋದನೆ ನೀಡುವಂತೆ ಉಪ ನಿಬಂಧಕರು, ಸಹಕಾರ ಇಲಾಖೆರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 5 | ಜೇನು ಕೃಷಿ ತರಬೇತಿ ಕಾರ್ಯಕ್ರಮದ ಲೆಕ್ಕಶೀರ್ಷಿಕೆ 2851-0-107-2-33(ಯೋಜನೆ) ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ತೋಟಗಾರಿಕೆ/2011-12 ದಿನಾಂಕ: 01-10-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜೇನು ಕೃಷಿ ಅಭಿವೃದ್ಧಿ ಲೆಕ್ಕಶೀರ್ಷಿಕೆ 2851-00-107-0-33 (ಯೋಜನೆ) ಯೋಜನೆಯ 2011-12ನೇ ಸಾಲಿನ ಕಾರ್ಯಕ್ರಮವನ್ನು ತೋಟಗಾರಿಕೆ ಇಲಾಖೆಗೆ ವರ್ಗಾಯಿಸಿದ್ದು, ಸದರಿ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ರೂ.3.00ಲಕ್ಷಗಳಿಗೆ ತಯಾರಿಸಿದ್ದು, ಅನುಮೋದನೆ ನೀಡುವಂತೆ ಕೋರಿ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಹಾಸನ ಇವರು ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>1. ತಾಲ್ಲೂಕಿಗೆ 30 ಅಭ್ಯರ್ಥಿಗಳ 4 ತಂಡದ ವೆಚ್ಚ ರೂ.15000X 4 ತಂಡ ರೂ.60000.00<br>ತರಬೇತಿ ಪಡೆದ 120 ಅಭ್ಯರ್ಥಿಗಳಿಗೆ ತಲಾ ರೂ.1350/-ಗಳ<br>ಒಂದುಜೇನು ಪೆಟ್ಟಿಗೆಗೆ ಉಚಿತವಾಗಿ ನೀಡಲು ರೂ.1350 X 120 ರೂ.1.62,000.00<br>2. ಜೇನುಕೃಷಿ ಕೇಂದ್ರದ 2 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಕಳೆ ಕತ್ತರಿಸುವ ಯಂತ್ರ ಖರೀದಿಗಾಗಿ ಮತ್ತು ಬೇಲಿ ಟ್ರಿಮ್ಮರ್ ರೂ.30,000.00<br>3. ಜೇನು ಕೃಷಿ ಕೇಂದ್ರ ಕೊನೇರಲು ಬೇಲೂರು ತಾಲ್ಲೂಕು ಹಾಗೂ ಸಕಲೇಶಪುರ ತಾ: ಉಚ್ಚಂಗಿ ಜೇನು ಕೃಷಿ ಕೇಂದ್ರಗಳ ವಾರ್ಷಿಕ ನಿರ್ವಹಣೆ ರೂ.48,000.00<br>-------------------<br>ಒಟ್ಟು ರೂ.3,00,000.00<br>------------------- | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಹಾಸನ ಇವರು ಕೋರಿರುವಂತೆ ಜೇನು ಕೃಷಿ ಅಭಿವೃದ್ಧಿ ಲೆಕ್ಕಶೀರ್ಷಿಕೆ 2851-00-107-0-33 (ಯೋಜನೆ) ಯೋಜನೆಯ ರೂ.3.00ಲಕ್ಷಗಳ ಅನುದಾನಕ್ಕೆ ಸಿದ್ದಪಡಿಸಿ ಸಲ್ಲಿಸಿರುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>**<u>ಕ್ರಿಯಾ ಯೋಜನೆ ವಿವರ ಕೆಳಕಂಡಂತಿರುತ್ತದೆ.</u>**<br>1. ತಾಲ್ಲೂಕಿಗೆ 30 ಅಭ್ಯರ್ಥಿಗಳ 4 ತಂಡದ ವೆಚ್ಚ ರೂ.15000X 4 ತಂಡ ರೂ.60000.00<br>ತರಬೇತಿ ಪಡೆದ 120 ಅಭ್ಯರ್ಥಿಗಳಿಗೆ ತಲಾ ರೂ.1350/-ಗಳ<br>ಒಂದುಜೇನು ಪೆಟ್ಟಿಗೆಗೆ ಉಚಿತವಾಗಿ ನೀಡಲು ರೂ.1350 X 120 ರೂ.1.62,000.00<br>2. ಜೇನುಕೃಷಿ ಕೇಂದ್ರದ 2 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಕಳೆ ಕತ್ತರಿಸುವಯಂತ್ರ ಖರೀದಿಗಾಗಿ ಮತ್ತು ಬೇಲಿ ಟ್ರಿಮ್ಮರ್ ರೂ.30,000.00<br>3. ಜೇನು ಕೃಷಿ ಕೇಂದ್ರ ಕೊನೇರಲು ಬೇಲೂರು ತಾಲ್ಲೂಕು ಹಾಗೂ ಸಕಲೇಶಪುರ ತಾ: ಉಚ್ಚಂಗಿ ಜೇನು ಕೃಷಿ ಕೇಂದ್ರಗಳ ವಾರ್ಷಿಕ ನಿರ್ವಹಣೆ ರೂ.48,000.00<br>-------------------<br>ಒಟ್ಟು ರೂ.3,00,000.00 |
| 6 | ಆಸ್ಪತ್ರೆ ಮತ್ತು ಔಷಧಾಲಯ ಗಳು ಲೆಕ್ಕಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆ -ಆಡಳಿತ ಮಂಜೂರಾತಿ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಪಶುಪಾಲನೆ/2011-12 ದಿನಾಂಕ: 30-09-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಪಶುಸಂಸ್ಥೆಗಳಲ್ಲಿನ ದಿನನಿತ್ಯದ ಚಿಕಿತ್ಸೆಗೆ ಅವಶ್ಯಕ ಜೀವರಕ್ಷಕ ಔಷಧಿಗಳನ್ನು ಪೂರೈಸಲು ರೂ.22.33 ಲಕ್ಷಗಳಲ್ಲಿ ಖರೀದಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ, ಆಸ್ಪತ್ರೆ ಮತ್ತು ಔಷಧಿಗಳು ಲೆಕ್ಕಶೀರ್ಷಿಕೆಯಡಿ ಪಶುಸಂಸ್ಥೆಗಳಲ್ಲಿನ |

| | | | |
|---|---|---|---|
| | | | ದಿನನಿತ್ಯದ ಚಿಕಿತ್ಸೆಗೆ ಅವಶ್ಯಕ ಜೀವರಕ್ಷಕ ಔಷಧಿಗಳನ್ನು ರೂ.22.33ಲಕ್ಷ (ರೂಪಾಯಿ ಇಪ್ಪತ್ತೆರಡು ಲಕ್ಷದ ಮೂವತ್ತಮೂರು ಸಾವಿರ ಮಾತ್ರ)ಗಳಲ್ಲಿ ಸರ್ಕಾರದಿಂದ ಅಂಗೀಕೃತವಾದ ದರಗುತ್ತಿಗೆ ಸಂಸ್ಥೆಗಳಿಂದ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 7 | ರೇಷ್ಮೆ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಕೃಕೈಸ್ಥಾ/ರೇಷ್ಮೆ/2011–12 ದಿನಾಂಕ: 01–10–2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಕೆಳಕಂಡಂತೆ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.<br>1. ಸೋನಿ ಹ್ಯಾಂಡಿ ಕ್ಯಾಮ್ (ವಿಡಿಯೋ ಕ್ಯಾಮೆರಾ) ಖರೀದಿಗೆ ಆಡಳಿತ ಮಂಜೂರಾತಿ ನೀಡುವ ಬಗ್ಗೆ ರೂ. 18,990.00<br>2. ರೇಷ್ಮೆ ಇಲಾಖೆಯ ಪ್ರಾಯೋಜಿತ ಕಾರ್ಯಕ್ರಮ ರೇಡಿಯೋ ರೇಷ್ಮೆ ಪ್ರಸಾರಕ್ಕೆ ಆಡಳಿತ ಮಂಜೂರಾತಿ ನೀಡುವ ಬಗ್ಗೆ ರೂ.24,611.00<br>3. ತಾಂತ್ರಿಕ ಯೋಜನಾ ಕಾರ್ಯಕ್ರಮಗಳ ಮಾಹಿತಿಗಳನ್ನೊಳಗೊಂಡ ಕೈಪಿಡಿಯನ್ನು ಮುದ್ರಿಸಿ ಖರೀದಿಸಲು ಅನುಮತಿ ನೀಡುವ ಬಗ್ಗೆ ರೂ.50000.00 | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲು ನಿರ್ಣಯಿಸಲಾಯಿತು.<br>1. ಸೋನಿ ಹ್ಯಾಂಡಿ ಕ್ಯಾಮ್ (ವಿಡಿಯೋ ಕ್ಯಾಮೆರಾ) ವನ್ನು ರೂ. 18,990.00(ರೂಪಾಯಿ ಹದಿನೆಂಟು ಸಾವಿರದ ಒಂಬೈನೂರ ತೊಂಬತ್ತು ಮಾತ್ರ)ಗಳಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲಾಯಿತು.<br>2. ರೇಷ್ಮೆ ಇಲಾಖೆಯ ಪ್ರಾಯೋಜಿತ ಕಾರ್ಯಕ್ರಮ ರೇಡಿಯೋ ರೇಷ್ಮೆ ಪ್ರಸಾರಕ್ಕೆ ತಗಲುವ ವೆಚ್ಚ ರೂ.24,611.00(ರೂಪಾಯಿ ಇಪ್ಪತ್ತನಾಲ್ಕು ಸಾವಿರದ ಆರುನೂರ ಹನ್ನೊಂದು ಮಾತ್ರ)ಗಳಿಗೆ ಆಡಳಿತ ಮಂಜೂರಾತಿ ನೀಡಲಾಯಿತು.<br>3. ತಾಂತ್ರಿಕ ಯೋಜನಾ ಕಾರ್ಯಕ್ರಮಗಳ ಮಾಹಿತಿಗಳನ್ನೊಳಗೊಂಡ ಕೈಪಿಡಿಯನ್ನು ರೂ.50000.00 (ರೂಪಾಯಿ ಐವತ್ತು ಸಾವಿರ ಮಾತ್ರ)ಗಳ ಮಿತಿಯಲ್ಲಿ ನಿಯಮಾನುಸಾರ ಮುದ್ರಿಸಿ ಕೊಳ್ಳಲು ಸಭೆಯಲ್ಲಿ ಅನುಮತಿ ನೀಡಲಾಯಿತು. |
| 8 | 2010–11ನೇ ಸಾಲಿನಲ್ಲಿ ಹಾಸನ ನಗರಸಭಾ ಆವರಣದಲ್ಲಿ ನಡೆಸಲಾದ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಮೀನುಗಾರಿಕೆ/ಕರಪತ್ರ/2011–12 ದಿನಾಂಕ: 01–10–2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2010–11ನೇ ಸಾಲಿನಲ್ಲಿ ಹಾಸನ ನಗರಸಭಾ ಆವರಣದಲ್ಲಿ ನಡೆಸಲಾದ ಕೃಷಿ ಮತ್ತು ಕೈಗಾರಿಕಾ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮೀನುಗಾರಿಕಾ ಹಿರಿಯ ಸಹಾಯಕ |

<table>
<tr>
<td></td>
<td>ಕೃಷಿ ಮತ್ತು ಕೈಗಾರಿಕಾ ವಸ್ತುಪ್ರದರ್ಶನದಲ್ಲಿ ಸಾರ್ವಜನಿಕರ ತಿಳುವಳಿಕೆಗಾಗಿ ಮೀನುಗಾರಿಕೆ ಇಲಾಖೆಯ ಯೋಜನೆಗಳ ಮಾಹಿತಿಯ ಕರಪತ್ರಗಳನ್ನು ಮುದ್ರಿಸಲು ಮಂಜೂರಾಗಿದ್ದ ಹಣವನ್ನು 2011-12ನೇ ಸಾಲಿನಲ್ಲಿ ನಗದೀಕರಿಸಲು ಪರಿಷ್ಕೃತ ಆದೇಶ ನೀಡುವ ಕುರಿತು.</td>
<td>ವಸ್ತುಪ್ರದರ್ಶನದಲ್ಲಿ ಸಾರ್ವಜನಿಕರ ತಿಳುವಳಿಕೆಗಾಗಿ ಮೀನುಗಾರಿಕೆ ಇಲಾಖೆಯ ಯೋಜನೆಯಡಗಳ ಮಾಹಿತಿಯ ಕರಪತ್ರಗಳನ್ನು ಮುದ್ರಿಸಲು ಮಂಜೂರಾಗಿದ್ದ ರೂ.20000/-ಗಳನ್ನು 2011-12ನೇ ಸಾಲಿನಲ್ಲಿ ನಗದೀಕರಿಸಲು ಪರಿಷ್ಕೃತ ಆದೇಶ ನೀಡುವಂತೆ ಮೀನುಗಾರಿಕಾ ಹಿರಿಯ ಸಹಾಯಕ ನಿರ್ದೇಶಕರು, ಜಿಲ್ಲಾ ಪಂಚಾಯತ್, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.</td>
<td>ನಿರ್ದೇಶಕರು, ಮೀನುಗಾರಿಕೆ ಇಲಾಖೆರವರು ಕೋರಿರುವಂತೆ, 2010-11ನೇ ಸಾಲಿನಲ್ಲಿ ಹಾಸನ ನಗರಸಭಾ ಆವರಣದಲ್ಲಿ ನಡೆಸಲಾದ ಕೃಷಿ ಮತ್ತು ಕೈಗಾರಿಕಾ ವಸ್ತುಪ್ರದರ್ಶನದಲ್ಲಿ ಸಾರ್ವಜನಿಕರ ತಿಳುವಳಿಕೆಗಾಗಿ ಮೀನುಗಾರಿಕೆ ಇಲಾಖೆಯ ಯೋಜನೆಗಳ ಮಾಹಿತಿಯ ಕರಪತ್ರಗಳನ್ನು ಮುದ್ರಿಸಲು ಮಂಜೂರಾಗಿದ್ದ ರೂ.20000/- (ರೂಪಾಯಿ ಇಪ್ಪತ್ತು ಸಾವಿರ ಮಾತ್ರ) ಗಳನ್ನು 2011-12ನೇ ಸಾಲಿನಲ್ಲಿ ನಗದೀಕರಿಸಲು ಪರಿಷ್ಕೃತ ಆದೇಶ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ನಿರ್ಣಯಿಸಲಾಯಿತು.</td>
</tr>
<tr>
<td>9</td>
<td>ಸಾಮಾಜಿಕ ಅರಣ್ಯ ವಿಭಾಗದ ಇಲಾಖೆಯ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ.</td>
<td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಬಿ(3)ಸಾ.ಅರಣ್ಯ/ 2011-12 ದಿನಾಂಕ: 03-10-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br><br>ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ರವರ ಕಛೇರಿಯ ಕೊಠಡಿಗೆ ಹೊಸ ಟೇಬಲ್, ಹ್ಯಾಂಡಿಕ್ಯಾಂ ಖರೀದಿ ಮತ್ತು ಚಿಕ್ಕಕಡಲೂರು ಸಸ್ಯಕ್ಷೇತ್ರಕ್ಕೆ 2 ಹೆಚ್.ಪಿ.ಡೀಸೆಲ್ ಪಂಪ್‌ಸೆಟ್ ಖರೀದಿ ಮತ್ತು ವಲಯಗಳಲ್ಲಿ 2011-12ನೇ ಸಾಲಿಗೆ ಅಳತೆ ಪಾಲಿಥೀನ್ ಚೀಲಗಳಲ್ಲಿ ಸಸಿಗಳನ್ನು ಬೆಳೆಸಲು 16.00ಲಕ್ಷ ಪಾಲಿಥೀನ್ ಚೀಲಗಳ ಖರೀದಿಗೆ ಹಾಗೂ 2010-11ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೆಳೆಸಿದ ಸಸಿಗಳಲ್ಲಿ ರೈತರಿಗೆ /ಫಲಾನುಭವಿಗಳಿಗೆ ವಿತರಿಸಿ ಉಳಿಕೆಯಾಗುವ ಸಸಿಗಳನ್ನು 2011-12ನೇ ಸಾಲಿನಲ್ಲಿ ಬೆಳೆಸುವ 8*12 ಅಳತೆಯ ಪಾಲಿಥೀನ್ ಚೀಲಗಳಲ್ಲಿ ಮರುನಾಟಿ ಮಾಡಲು ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಗಳ ವಿವರ ಕೆಳಕಂಡಂತಿರುತ್ತವೆ.<br>
<table>
<tr><th>ಕ್ರಸಂ</th><th>ವಿವರ</th><th>ಅಂದಾಜು ಮೊತ್ತ</th></tr>
<tr><td>1</td><td>Conference Table size 3200MML X 1200MMD x 760MMH (ಕೊಟೇಷನ್ ದರದಂತೆ)</td><td>ರೂ.51631.00</td></tr>
<tr><td>2</td><td>ಹ್ಯಾಂಡಿ ಕ್ಯಾಮ್-ಸೋನಿ</td><td></td></tr>
<tr><td>3</td><td>ಲ್ಯಾಪ್‌ಟ್ಯಾಪ್</td><td>51521<br>+ ವ್ಯಾಟ್</td></tr>
<tr><td>4</td><td>15.00 ಲಕ್ಷ 8*12 ಪಾಲಿಥೀನ್ ಚೀಲಗಳ ಖರೀದಿಗೆ ಮಂಜೂರಾತಿ ಬಗ್ಗೆ</td><td>ಇಲಾಖಾ ಅಂಗೀಕೃತ ದರದಂತೆ</td></tr>
</table>
</td>
<td>ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಸಲ್ಲಿಸಿರುವ ಪ್ರಸ್ತಾವನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಕೆಳಕಂಡಂತೆ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>1. Conference Table size 3200MML X 1200MMD x 760MMH (ಕೊಟೇಷನ್ ದರದಂತೆ) ಯೋಜನೇತರ ಲೆಕ್ಕಶೀರ್ಷಿಕೆ 2406-00-101-0-26 ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ರೂ.51,631.00ಗಳಲ್ಲಿ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅನುಮೋದನೆ ನೀಡಲಾಯಿತು.<br>2. ಹ್ಯಾಂಡಿ ಕ್ಯಾಮ್-ಸೋನಿ ಕ್ಯಾಮೆರಾವನ್ನು ದರಪಟ್ಟಿ ಕರೆದು ಕಡಿಮೆ ದರ ನಮೂದಿಸುವ ಸಂಸ್ಥೆಯ ವತಿಯಿಂದ ಎಂ.ಜಿ.ಎನ್.ಆರ್.ಇ.ಜಿ.ಎ ಅನುದಾನ ದಲ್ಲಿ (ಆಡಳಿತ ವೆಚ್ಚ) ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅನುಮೋದನೆ ನೀಡಲಾಯಿತು.<br>3. ಲ್ಯಾಪ್‌ಟ್ಯಾಪ್ ರೂ.51521.00 ವ್ಯಾಟ್ ಪ್ರತ್ಯೇಕ ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಅನುದಾನದಲ್ಲಿ (ಆಡಳಿತ ವೆಚ್ಚ) ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ</td>
</tr>
</table>

| | | | |
|---|---|---|---|
| | | | ಅನುಮೋದನೆ ನೀಡಲಾಯಿತು.<br>15.00 ಲಕ್ಷ 8*12 ಪಾಲಿಥೀನ್ ಚೀಲಗಳನ್ನು ಇಲಾಖಾ ಅಂಗೀಕೃತ ದರದಂತೆ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅನುಮೋದನೆ ನೀಡಲಾಯಿತು. |
| 10 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| 1 | 2011ರ ಅಕ್ಟೋಬರ್ ಮಾಹೆಯಲ್ಲಿ ಮೈಸೂರಿನಲ್ಲಿ ನಡೆದ ದಸರಾ ಮಹೋತ್ಸವದಲ್ಲಿ ಸ್ತಬ್ಧಚಿತ್ರ ಮತ್ತು ವಸ್ತುಪ್ರದರ್ಶನ ಮಾರಾಟ ಮಳಿಗೆಯನ್ನು ತೆರೆಯಲು ವಂತಿಕೆ ನೀಡಿರುವುದಕ್ಕೆ ಅನುಮೋದನೆ ನೀಡುವ ಕುರಿತು. | 2011ನೇ ಅಕ್ಟೋಬರ್ ಮಾಹೆಯಲ್ಲಿ ಮೈಸೂರಿನಲ್ಲಿ ನಡೆದ ದಸರಾ ಮಹೋತ್ಸವದಲ್ಲಿ ಹಾಸನ ಜಿಲ್ಲಾ ಪಂಚಾಯಿತಿ ವತಿಯಿಂದ ಸ್ತಬ್ಧಚಿತ್ರ ಮತ್ತು ವಿವಿಧ ಇಲಾಖೆಗಳಿಂದ ವಸ್ತುಪ್ರದರ್ಶನ ಹಾಗೂ ಮಾರಾಟ ಮಳಿಗೆಗಳನ್ನು ತೆರೆಯಲು ವಿವಿಧ ಇಲಾಖೆಗಳ ವತಿಯಿಂದ ಕೆಳಕಂಡಂತೆ ವಂತಿಕೆಯನ್ನು ನೀಡಿದ್ದು, ಸಭೆಯಲ್ಲಿ ವಂತಿಕೆ ನೀಡಿರುವುದಕ್ಕೆ ಅನುಮೋದನೆಯನ್ನು ನೀಡಬೇಕೆಂದು ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಕೋರಿದರು.<br><br>**<u>ವಂತಿಕೆ ನೀಡಿರುವ ಇಲಾಖೆಗಳ ವಿವರ</u>**<br>1. ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ – ರೂ.1.50ಲಕ್ಷ<br>2. ತೋಟಗಾರಿಕೆ ಇಲಾಖೆ -ರೂ.0.50ಲಕ್ಷ<br>3. ಕೃಷಿ ಇಲಾಖೆ -ರೂ.0.50ಲಕ್ಷ<br>4. ಸಾಮಾಜಿಕ ಅರಣ್ಯ ವಿಭಾಗ -ರೂ.0.50ಲಕ್ಷ<br>5. ಪಶುಪಾಲನಾ ಇಲಾಖೆ - ರೂ.0.50ಕ್ಷ<br>6. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ -ರೂ.0.45ಲಕ್ಷ<br>------------------<br>ಒಟ್ಟು ರೂ.3.95ಲಕ್ಷಗಳು<br>------------------ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2011ನೇ ಅಕ್ಟೋಬರ್ ಮಾಹೆಯಲ್ಲಿ ನಡೆದ ಮೈಸೂರು ದಸರಾ ಮಹೋತ್ಸವದಲ್ಲಿ ಹಾಸನ ಜಿಲ್ಲಾ ಪಂಚಾಯಿತಿ ವತಿಯಿಂದ ಸ್ತಬ್ಧಚಿತ್ತ ಮತ್ತು ವಿವಿಧ ಇಲಾಖೆಗಳಿಂದ ವಸ್ತುಪ್ರದರ್ಶನ ಹಾಗೂ ಮಾರಾಟ ಮಳಿಗೆಗಳನ್ನು ತೆರೆಯಲು ವಿವಿಧ ಇಲಾಖೆಗಳ ವತಿಯಿಂದ ನೀಡಿರುವ ಒಟ್ಟು ರೂ.3.95ಲಕ್ಷಗಳು (ರೂಪಾಯಿ ಮೂರು ಲಕ್ಷದ ತೊಂಬತ್ತೈದು ಸಾವಿರ ಮಾತ್ರ)ಗಳ ವಂತಿಕೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>**<u>ವಂತಿಕೆ ನೀಡಿರುವ ಇಲಾಖೆಗಳ ವಿವರ</u>**<br>1) ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ – ರೂ.1.50ಲಕ್ಷ<br>2) ತೋಟಗಾರಿಕೆ ಇಲಾಖೆ -ರೂ.0.50ಲಕ್ಷ<br>3) ಕೃಷಿ ಇಲಾಖೆ -ರೂ.0.50ಲಕ್ಷ<br>4) ಸಾಮಾಜಿಕ ಅರಣ್ಯ ವಿಭಾಗ -ರೂ.0.50ಲಕ್ಷ<br>5) ಪಶುಪಾಲನಾ ಇಲಾಖೆ - ರೂ.0.50ಕ್ಷ<br>6) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ -ರೂ.0.45ಲಕ್ಷ<br>------------------<br>ಒಟ್ಟು ರೂ.3.95ಲಕ್ಷಗಳು<br>------------------ |
| 2 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅವ್ಯವಹಾರದಡಿಯಲ್ಲಿ ಅರಕಲಗೂಡು ತಾಲ್ಲೂಕಿನಲ್ಲಿ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಮಾತನಾಡುತ್ತಾ, ಅರಕಲಗೂಡು ತಾಲ್ಲೂಕಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅವ್ಯವಹಾರದ ಹಿನ್ನೆಲೆಯಲ್ಲಿ ಜಲಾನಯನ ಇಲಾಖೆಯ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ. ಇದರಿಂದ, ಇಲಾಖೆಯ ಇತರೆ ಯೋಜನೆಗಳನ್ನು ಅನುಷ್ಠಾನ ಮಾಡುವುದು ತುಂಬಾ ಕಷ್ಟಸಾಧ್ಯವಾಗಿದ್ದು, ಪ್ರಗತಿಯನ್ನು ಸಾಧಿಸಲು ತೊಂದರೆಯಾಗಿರುತ್ತದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಅರಕಲಗೂಡು ತಾಲ್ಲೂಕಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅವ್ಯವಹಾರದ ಹಿನ್ನೆಲೆಯಲ್ಲಿ |

| | | | |
|---|---|---|---|
| | ಅಮಾನತ್ತಿನಲ್ಲಿರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ/ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಲೈನ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳನ್ನು ಕರ್ತವ್ಯಕ್ಕೆ ಪುನರ್ ಸ್ಥಾಪಿಸುವ ಬಗ್ಗೆ. | ಆದ್ದರಿಂದ, ಅಮಾನತ್ತಿನಲ್ಲಿಡಲಾಗಿರುವ ಇಲಾಖಾ ಅಧಿಕಾರಿಗಳನ್ನು ಕರ್ತವ್ಯಕ್ಕೆ ಪುನರ್ ಸ್ಥಾಪಿಸಲು ಕ್ರಮ ವಹಿಸಬೇಕೆಂದು ಕೋರಿದರು.<br>ಇದಕ್ಕೆ ಸಭೆಯಲ್ಲಿ ಹಾಜರಿದ್ದ ಇತರೆ ಇಲಾಖೆಯವರಾದ, ತೋಟಗಾರಿಕೆ, ಸಾಮಾಜಿಕ ಅರಣ್ಯ ಇಲಾಖೆಯ ಅಧಿಕಾರಿಗಳು ತಮ್ಮ ಸಹಮತವನ್ನು ವ್ಯಕ್ತಪಡಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯದರ್ಶಿ/ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು/ ವಿವಿಧ ಇಲಾಖೆಯ ಅಧಿಕಾರಿಗಳು ಇಲ್ಲದೆ ಕಛೇರಿಗಳಲ್ಲಿ ಯಾವುದೇ ಕೆಲಸಕಾರ್ಯಗಳು ಸಮರ್ಪವಾಗಿ ನಡೆಯುತ್ತಿಲ್ಲ. ಆದ್ದರಿಂದ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ/ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಲೈನ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳನ್ನು ಕರ್ತವ್ಯಕ್ಕೆ ಪುನರ್ ಸ್ಥಾಪಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>ಇದಕ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು ತಮ್ಮ ಸಹಮತವನ್ನು ವ್ಯಕ್ತಪಡಿಸಿದರು. | ಅಮಾನತ್ತಿನಲ್ಲಿಡಲಾಗಿರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು/ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು/ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಅಭಿಯಂತರರುಗಳು/ವಿವಿಧ ಲೈನ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಮತ್ತು ವಿವಿಧ ಇಲಾಖೆಗಳಲ್ಲಿ ಸಮರ್ಪಕವಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಕರ್ತವ್ಯಕ್ಕೆ ಪುನರ್ ಸ್ಥಾಪಿಸಲು ಕ್ರಮ ವಹಿಸಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಒತ್ತಾಯಿಸಿ, ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 3 | ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಮಂಜೂರು ಮಾಡುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀಮತಿ ಸುಲೋಚನಾ ರಾಮಕೃಷ್ಣರವರು ಮಾತನಾಡುತ್ತಾ, ಬೆಳಗೋಡು ಜಿಲ್ಲಾ ಪಂಚಾಯಿತಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸುಂಡೇಕೆರೆ, ಉದೇವಾರ, ಕಲ್ಲಳ್ಳಿ, ಹೆಬ್ಬನಹಳ್ಳಿ, ಮೂಗಲಿ ಗ್ರಾಮಗಳಲ್ಲಿ ರೈತರು ಹೈನುಗಾರಿಕೆಯನ್ನು ಮಾಡುತ್ತಿದ್ದು, ಸಮೀಪದಲ್ಲಿ ಹಾಲು ಉತ್ಪಾದಕರ ಸಂಘ ಇಲ್ಲದೆ ರೈತರಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ, ಹೊಸದಾಗಿ ಹಾಲು ಉತ್ಪಾದಕರ ಸಂಘವನ್ನು ಮಂಜೂರು ಮಾಡಬೇಕೆಂದು ಕೋರಿದರು. (ಮಾರ್ಗ: ಸುಂಡೇಕೆರೆ, ಉದೇವಾರ, ಕಲ್ಲಳ್ಳಿ, ಹೆಬ್ಬನಹಳ್ಳಿ, ಮೂಗಲಿ ಬೆಳಗೋಡು, ಪಾಳ್ಯ, ಹಾಸನ) | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಸದಸ್ಯರು ಕೋರಿರುವಂತೆ ಬೆಳಗೋಡು ಜಿಲ್ಲಾ ಪಂಚಾಯಿತಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಉದೇವಾರ, ಕಲ್ಲಳ್ಳಿ, ಹೆಬ್ಬನಹಳ್ಳಿ, ಮೂಗಲಿ ಗ್ರಾಮಗಳ ರೈತರಿಗೆ ಅನುಕೂಲವಾಗುವಂತೆ ಸಮೀಪದಲ್ಲಿ ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಮಂಜೂರು ಮಾಡುವಂತೆ ಹಾಸನ ಹಾಲು ಒಕ್ಕೂಟಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | | ಮತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಹುಚ್ಚೇಗೌಡ)
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ.